# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1274 |
| ಮಾನ್ಯ ಸದಸ್ಯರ ಹೆಸರು | ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 19.03.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ನಕ್ಷೆಯಲ್ಲಿ ದಾಖಲಾಗಿರುವಂತೆ ರೈತರ ಜಮೀನುಗಳಿಗೆ ಓಡಾಡಲು ಮತ್ತು ವ್ಯವಸಾಯ ಪರಿಕರಗಳನ್ನು ಸಾಗಿಸಿಕೊಳ್ಳಲು ಅವಶ್ಯಕವಾಗಿರುವ ಕಾಲುದಾರಿ, ಬಂಡಿಜಾಡು ಇತ್ಯಾದಿ ದಾರಿಗಳಿಗೆ ನಿಗದಿಪಡಿಸಿರುವ ಅಗಲಕ್ಕೆ ಸಂಬಂಧಪಟ್ಟಂತೆ ಇರುವ ನಿಯಮಗಳೇನು: (ಪೂರ್ಣ ವಿವರ ನೀಡುವುದು) | 1)ಕರ್ನಾಟಕ ರೆವಿನ್ಯೂ ಸರ್ವೆ ಮ್ಯಾನ್ಯುಯಲ್ ಅಧ್ಯಾಯ 5ರ 5ನೇ ಕಂಡಿಕೆ ಪ್ರಕಾರ ನಕಾಶೆಯಲ್ಲಿ (---------) ಈ ಚಿಹ್ನೆಯಿಂದ ತೋರಿಸಿರುವ ದಾರಿಯು ಕಾಲುದಾರಿಯಾಗಿದ್ದು, ಅದರ ಅಗಲ ¼ ಸರಪಳಿ ಅಥವಾ 4 ಆಣೆ ಅಂದರೆ ಆಧುನಿಕ ಮೆಟ್ರಿಕ್ ಮಾಪನ ಪದ್ಧತಿಯಲ್ಲಿ 2.5 ಮೀಟರ್ ಆಗಿರುತ್ತದೆ. (8 ಅಡಿ 3 ಇಂಚು).<br>2) ಬಂಡಿದಾರಿ ಅಗಲ(======) 6.25 ಮೀಟರ್ (20 ಅಡಿ ಅಥವಾ 32 ಲಿಂಕ್) ಆಗಿರುತ್ತದೆ. ಸದರಿ ರಸ್ತೆಗಳ ಅಗಲವನ್ನು ಸರ್ವೆ ಅಧಿಕಾರಿಗಳು ನಕ್ಷೆಯಂತೆ ಸ್ಥಳದಲ್ಲಿ ಅಳತೆ ಮಾಡಿ ನಿಗದಿಪಡಿಸತಕ್ಕದ್ದಾಗಿರುತ್ತದೆ. |
| ಆ) | ಗ್ರಾಮ ನಕ್ಷೆಯಲ್ಲಿ ರೈತರ ಜಮೀನುಗಳಿಗೆ ಓಡಾಡಲು ದಾರಿ ದಾಖಲಾಗದೇ ಇರುವ ಪಕ್ಷದಲ್ಲಿ ಮತ್ತು ರೈತರಿಗೆ ಓಡಾಡಲು ಹಾಗೂ ವ್ಯವಸಾಯ ಪರಿಕರಗಳನ್ನು ಸಾಗಿಸಲು ತೊಂದರೆಯಾದ ಸಂದರ್ಭದಲ್ಲಿ ರೈತರು ದಾರಿಗಾಗಿ ನಿರ್ವಹಿಸಬೇಕಾದ ಕ್ರಮಗಳೇನು; ದಾರಿ ಸಮಸ್ಯೆ ಬಗೆಹರಿಸಲು ಸರ್ಕಾರದಿಂದ ಮಾಡಿಕೊಡುವ ಕ್ರಮಗಳೇನು; | ಕರ್ನಾಟಕ ಭೂ ಕಂದಾಯ ನಿಯಮಗಳು 1966 ರ ನಿಯಮ 59 ರಡಿ ಜಮೀನಿನ ಮೇಲೆ ತಿರುಗಾಡುವ ಮತ್ತು ಇತರ ಅನುಭೋಗದ ಹಕ್ಕುಗಳು, ಪಕ್ಷಕಾರರು ಒಪ್ಪಿಕೊಂಡ ಯಾವುದೇ ಅನುಭೋಗಗಳು ಅಥವಾ ಹಕ್ಕುಗಳನ್ನು ಹಕ್ಕು ದಾಖಲೆ ರಿಜಿಸ್ಟರ್ ನಲ್ಲಿ ಇತರ ಹಕ್ಕುಗಳು ಎಂಬ ಅಂಕಣದಲ್ಲಿ ನಮೂದಿಸಲು ಅವಕಾಶವಿರುತ್ತದೆ. |
| ಇ) | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿಯ ಯಾವ್ಯಾವ ಗ್ರಾಮಗಳ ವ್ಯಾಪ್ತಿಯಲ್ಲಿ ಜಮೀನುಗಳಿಗೆ ದಾರಿಯ ಸಮಸ್ಯೆ ಇದೆ; ಈ ಸಂಬಂಧ ರೈತರು ಲಿಖಿತ ಮನವಿ/ದೂರು ದಾಖಲು ಮಾಡಿದ್ದಾರೆಯೆ: (ಗ್ರಾಮ, ಸರ್ವೆ ನಂಬರ್ ವಾರು ವಿವರ ನೀಡುವುದು) | ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿ, ಹೊಸಹಳ್ಳಿ ದಾಖಲೆ ಚನ್ನತಿಮ್ಮಯ್ಯನಪಾಳ್ಯ ಗ್ರಾಮದ ಸ.ನಂ.56/9ಬಿ, 56/13, 56/14, 56/21, 56/25 ರ ಜಮೀನುಗಳಿಗೆ ಹೋಗಿ ಬರಲು ರಸ್ತೆ ಬಿಡಿಸಿಕೊಂಡುವಂತೆ ಮನವಿ ಸ್ವೀಕೃತಗೊಂಡಿರುತ್ತದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಈ) | ಸೋಂಪುರ ಹೋಬಳಿಯ ಕಾಸರಘಟ್ಟ ಗ್ರಾಮ ಮತ್ತು ಹೊಸಹಳ್ಳಿ ದಾಖಲೆಯ ಚನ್ನತಿಮ್ಮಯ್ಯನ ಪಾಳ್ಯದ ರೈತರು ಗ್ರಾಮ ನಕ್ಷೆಯಲ್ಲಿ ದಾಖಲಾಗಿರುವ ರಸ್ತೆಗಳನ್ನು ಸೇರಿಸಿಕೊಂಡು ಬೇಲಿ ಹಾಕಿಕೊಂಡಿರುವುದರಿಂದ ಮತ್ತು ಜಮೀನಿಗೆ ಓಡಾಡಲು ತೊಂದರೆಯಾಗಿದ್ದು, ರಸ್ತೆಯನ್ನು ಸರ್ವೆ ಮಾಡಿಸಿಕೊಡಬೇಕೆಂದು ಮನವಿ/ ದೂರನ್ನು ಸಲ್ಲಿಸಿರುವುದು ನಿಜವೇ; ಇದ್ದಲ್ಲಿ ಯಾವ ದಿನಾಂಕದಂದು ಮನವಿ/ದೂರನ್ನು ಸಲ್ಲಿಸಲಾಗಿದೆ; ಪರಿಹರಿಸಲು ಕೈಗೊಂಡಿರುವ ಕ್ರಮಗಳೇನು: ಯಾವ ನಿಗದಿತ ಕಾಲದೊಳಗೆ ಪರಿಹರಿಸಲಾಗುವುದು? (ಸಂಪೂರ್ಣ ವಿವರ ನೀಡುವುದು) | ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿ, ಹೊಸಹಳ್ಳಿ ದಾಖಲೆ ಚನ್ನತಿಮ್ಮಯ್ಯನಪಾಳ್ಯ ಗ್ರಾಮದ ಸ.ನಂ. 56/9ಬಿ, 56/13, 56/14, 56/21, 56/25 ರ ಜಮೀನುಗಳ ಮಧ್ಯ ಭಾಗದಲ್ಲಿ ಹಾದುಹೋಗಿರುವ ನಕಾಶೆ ದಾರಿಯನ್ನು ಸದರಿ ಸರ್ವೆ ನಂಬರ್‌ಗಳ ಕೊನೆಯ ಭಾಗದಲ್ಲಿ ಬಿಟ್ಟುಕೊಡಲು ಮೇಲ್ಕಂಡ ಜಮೀನುಗಳ ಎಲ್ಲಾ ಖಾತೆದಾರರು ಹೇಳಿಕೆ ನೀಡಿರುವಂತೆ ಸಾರ್ವಜನಿಕರ ಅನುಕೂಲಕ್ಕಾಗಿ ಪ್ರಸ್ತಾಪಿತ ಸರ್ವೆ ನಂಬರ್‌ಗಳ ಮಧ್ಯ ಭಾಗದಲ್ಲಿ ಹಾದುಹೋಗಿರುವ ನಕಾಶೆ ದಾರಿಯನ್ನು ಸದರಿ ಜಮೀನುಗಳ ಒಂದು ಬದಿಯಲ್ಲಿ ಸುಮಾರು 15 ಅಡಿಗಳ ರಸ್ತೆಯನ್ನು ದಿನಾಂಕ:28-05-2025ರಂದು ಬಿಡಿಸಿ ಸಾರ್ವಜನಿಕರು ಓಡಾಡಲು ಅನುವು ಮಾಡಿಕೊಡಲಾಗಿರುತ್ತದೆ. |

**ಸಂಖ್ಯೆ:** ಕಂಇ 71 ಎಸ್‌ಎಸ್‌ಸಿ 2025,

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು